೬) ಕ್ರಿಮಿನಲ್ ನ್ಯಾಯ ವಿತರಣೆಯಲ್ಲಿ ತೊಡಗಿರುವ ಇತರೆ ಅಂಗಸಂಸ್ಥೆಗಳ ಕಾರ್ಯನಿರ್ವಹಣೆಯಲ್ಲಿ ಲೋಪ ಕಂಡು ಬಂದಲ್ಲಿ ಅಂತಹ ಲೋಪಗಳ ನಿವಾರಣೆಗೆ ಸೂಕ್ತ ಸಲಹೆಗಳನ್ನು ನೀಡಿ, ಪ್ರಕರಣಗಳಲ್ಲಿ ಹೆಚ್ಚಿನ ಆರೋಪಿಗಳು ಬಿಡುಗಡೆ ಹೊಂದಿರುವ ಕಾರಣಗಳನ್ನು ಸಂಕ್ಷಿಪ್ತವಾಗಿ ತಿಳಿಸಿ, ಅಂತಹ ಲೋಪಗಳು ಪುನರಾವರ್ತನೆಯಾಗದಂತೆ ನಿಗಾ ವಹಿಸಬೇಕೆಂದು ಸೂಚಿಸಲಾಗುತ್ತಿದೆ.

೭) ಅಭಿಯೋಜನಾ ಇಲಾಖೆಯ ವಿಭಾಗೀಯ ಮತ್ತು ಮುಖ್ಯ ಕಛೇರಿಯ ವರಿಷ್ಠಾಧಿಕಾರಿಗಳು ತೀರ್ಪನ್ನು ಪರಿಶೀಲಿಸಿದಾಗ, ಸುಮಾರು ಶೇಕಡ ೬೦ರಷ್ಟು ಸಾಕ್ಷಿಗಳು ಅಭಿಯೋಜನೆಯನ್ನು ಸಮರ್ಥಿಸದೇ ನಾನಾ ಕಾರಣಗಳಿಗಾಗಿ ಪ್ರತಿಕೂಲ ಸಾಕ್ಷ್ಯ ನುಡಿಯುತ್ತಿರುವುದರಿಂದ, ಹೆಚ್ಚಿನ ಪ್ರಕರಣಗಳು ಖುಲಾಸೆಗೊಳ್ಳುತ್ತಿರುತ್ತವೆ, ಮತ್ತು ಸರಿಪಡಿಸಲಾಗದಂತಹ ತನಿಖಾ ವೈಪರೀತ್ಯಗಳ ಕಾರಣಗಳಿಗಾಗಿ ಕೆಲವು ಪ್ರಕರಣಗಳು ಆರೋಪಿಗಳ ಬಿಡುಗಡೆಯಲ್ಲಿ ಅಂತ್ಯಗೊಂಡಿರುವುದು ಗಮನಕ್ಕೆ ಬಂದಿರುತ್ತದೆ.

೮) ಸಾಕ್ಷಿದಾರರುಗಳು ಮತ್ತು ತನಿಖಾಧಿಕಾರಿಗಳು ಸಮಯಕ್ಕೆ ಸರಿಯಾಗಿ ಅಭಿಯೋಜಕರ ಕಛೇರಿಗೆ ಹಾಜರಾಗದೇ ಇರುವುದರಿಂದ, ಅಭಿಯೋಜಕರುಗಳು, ಸಾಕ್ಷಿದಾರರು ತನಿಖಾ ಸಮಯದಲ್ಲಿ ಕೊಟ್ಟ ಹೇಳಿಕೆಗಳನ್ನು ನೆನಪಿಸಿಕೊಡಲು ಸಾಧ್ಯವಾಗುತ್ತಿಲ್ಲ. ಸರಿಯಾದ ಸಮಯಕ್ಕೆ ಸಾಕ್ಷಿಗಳು ಹಾಜರಾಗಿರುವ ಮತ್ತು ತನಿಖಾಧಿಕಾರಿಗಳು ಹೆಚ್ಚಿನ ಆಸಕ್ತಿ ತೋರಿಸಿದ ಪ್ರಕರಣಗಳು ಶಿಕ್ಷೆಯಲ್ಲಿ ಅಂತ್ಯಗೊಂಡಿರುತ್ತವೆ. ಮೊಕದ್ದಮೆಗಳಲ್ಲಿ ತನಿಖಾಧಿಕಾರಿಗಳು ಮತ್ತು ಸಾಕ್ಷಿಗಳು ಆಸಕ್ತಿ ವಹಿಸಿರುವಂತಹ ಪ್ರಕರಣಗಳಲ್ಲಿ ಆರೋಪಿಗಳಿಗೆ ಶಿಕ್ಷೆಯಾಗಿರುತ್ತದೆ.

೯) ನ್ಯಾಯಾಲಯಗಳು ಹೆಚ್ಚು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಲು ಕಂಪ್ಯೂಟರೀಕರಣಗೊಳಿಸುವ ಕಾರ್ಯವನ್ನು ಹಂತಹಂತವಾಗಿ ಮಾಡಲಾಗುತ್ತಿದೆ.

ಮೈಸೂರು ತಾಲ್ಲೂಕಿನಲ್ಲಿರುವ ಮೀನುಗಾರ ಸಹಕಾರ ಸಂಘಗಳು.

೨೮೯೨(೩೩೨೫)

ಶ್ರೀ ಗುರುಸ್ವಾಮಿ ಎ.ಎಸ್.(ಚಾಮುಂಡೇಶ್ವರಿ): ಮಾನ್ಯ ಮೀನುಗಾರಿಕೆ, ಬಂದರು ಮತ್ತು ಪ್ರದೇಶಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ತಾಲ್ಲೂಕಿನಲ್ಲಿರುವ ಮೀನುಗಾರರ ಸಹಕಾರ ಸಂಘಗಳು ಎಷ್ಟು? ಕಾರ್ಯನಿರತವಾಗಿರುವುದು ಎಷ್ಟು? ಸ್ಥಗಿತಗೊಂಡಿರುವುದೆಷ್ಟು?

ಆ) ಎಷ್ಟು ಸಹಕಾರ ಸಂಘಗಳು ಲಾಭದಲ್ಲಿವೆ, ನಷ್ಟದಲ್ಲಿರುವುದು ಯಾವುದು? ಹಾಗೂ ಮುಚ್ಚಿರುವದು ಯಾವುದು? ಮತ್ತು ಅವುಗಳು ಯಾವುವು?

ಸಿ) ಮೀನುಗಾರಿಕೆ ಮಹಾಮಂಡಳಿ ಮಧ್ಯ ಪ್ರವೇಶದಿಂದಾಗಿ ಸಣ್ಣ ಪ್ರಮಾಣದ ಮೀನುಗಾರರ ಸಹಕಾರ ಸಂಘಗಳಿಗೆ ತೊಂದರೆ ಉಂಟಾಗಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ?

ಡಿ) ಹಾಗಿದ್ದರೆ, ಈ ರೀತಿ ಅಡಚಣೆ ಉಂಟಾಗದಂತೆ ಸರ್ಕಾರ ಕೈಗೊಂಡಿರುವ ಕ್ರಮ ಏನು?

ಶ್ರೀ ರಮಾನಾಥ ರೈ (ಮೀನುಗಾರಿಕೆ, ಬಂದರು ಮತ್ತು ಪ್ರದೇಶಾಭಿವೃದ್ಧಿ ಸಚಿವರು):

ಅ) ರಾಜ್ಯ ಮಟ್ಟದ ಮಹಾಮಂಡಳಿ ಸೇರಿದಂತೆ ೧೧. ಇವುಗಳ ಪೈಕಿ ೮ ಕೆಲಸ ನಿರ್ವಹಿಸುತ್ತಿರುವುವು. ಉಳಿದ ೩ ಕಾರ್ಯ ಚಟುವಟಿಕೆಯಲ್ಲಿಲ್ಲ.

ಆ) ಯಾವುದೂ ಇಲ್ಲ. ೮ ನಷ್ಟದಲ್ಲಿವೆ. ಅವುಗಳು ಕೆಳಕಂಡಂತಿದೆ.:

೧) ಕರ್ನಾಟಕ ಸಹಕಾರ ಮೀನುಗಾರಿಕೆ ಮಹಾ ಮಂಡಳಿ(ನಿ) ಮೈಸೂರು.

೨) ಮೀನುಗಾರಿಕೆ ಸಹಕಾರ ಸಂಘ, ರಮ್ಮನಹಳ್ಳಿ.

೩) ಮೀನುಗಾರಿಕೆ ಸಹಕಾರ ಸಂಘ, ಮೆಲ್ಲಹಳ್ಳಿ.

೪) ಮೀನು ಕೃಷಿಕರ ಅಭಿವೃದ್ಧಿ ಸಂಸ್ಥೆ ಸಹಕಾರಿ ಸಂಘ ಮೈಸೂರು.

೫) ತಾಲ್ಲೂಕು ಮೀನು ಮಾರುಕಟ್ಟೆ ಮತ್ತು ಉತ್ಪಾದನಾ ಸಹಕಾರ ಸಂಘ, ಮೈಸೂರು.

೬) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಜಿಲ್ಲಾ ಸಹಕಾರಿ ಸಂಘ, ಮೈಸೂರು.

೭) ಉದ್ಯೋರು ಮೀನುಗಾರರ ಸಹಕಾರ ಸಂಘ, ಉದ್ಯೋರು

೮) ಕೆರೆ ಅಭಿವೃದ್ಧಿ ಮೀನುಗಾರರ ಸಹಕಾರ ಸಂಘ ಮೈಸೂರು.

ಮೂರು ಸಹಕಾರ ಸಂಘಗಳು ಕಾರ್ಯ ಚಟುವಟಿಕೆಯಲ್ಲಿರುವುದಿಲ್ಲ. ಯಾವುವೆಂದರೆ:

೧) ಮಾನಾಕ್ಷಿಪುರಂ ಮಾನುಗಾರರ ಸಹಕಾರ ಸಂಘ ಎಡೆಹಳ್ಳಿ (ಮಾನಾಕ್ಷಿಪುರ)

೨) ಗಂಗಾಪರಮೇಶ್ವರಿ ಮಾನುಗಾರರ ಸಹಕಾರ ಸಂಘ, ಮೆಲ್ಲಹಳ್ಳಿ

೩) ಜಿಲ್ಲಾ ಮಹಿಳಾ ಮಾನುಗಾರರ ಸಹಕಾರ ಸಂಘ ಮೈಸೂರು.

ಸಿ) ಕರ್ನಾಟಕ ಸಹಕಾರಿ ಮಾನುಗಾರಿಕೆ ಮಹಾಮಂಡಳಿ ಕಾರ್ಯ ನಿರ್ವಹಿಸುತ್ತಿರುವ ರೀತಿಯಿಂದಾಗಿ ಅನೇಕ ಸಹಕಾರ ಸಂಘಗಳು ತೊಂದರೆಗೀಡಾಗಿವೆ ಎಂಬ ಬಗ್ಗೆ ಸರ್ಕಾರಕ್ಕೆ ಮನವಿ ಬಂದಿದೆ. ಆದರೆ, ಮಹಾಮಂಡಳಿಯ ಮಧ್ಯ ಪ್ರವೇಶದಿಂದ ಸಹಕಾರ ಸಂಘಗಳು ತೊಂದರೆಗೀಡಾಗಿವೆ ಎಂದು ಹೇಳಲು ಸಾಧ್ಯವಿಲ್ಲ.

ಡಿ) ಉದ್ಭವಿಸುವುದಿಲ್ಲ.

ಚಾಮುಂಡಿಬೆಟ್ಟ ಸೇರಿದಂತೆ ಮೈಸೂರು ನಗರ, ತಾಲ್ಲೂಕಿನಲ್ಲಿ ಪ್ರವಾಸೋದ್ಯಮವನ್ನು ಅಭಿವೃದ್ಧಿಪಡಿಸುವುದು.

೨೮೯೩(೩೩೨೬)

ಶ್ರೀ ಎ.ಎಸ್.ಗುರುಸ್ವಾಮಿ (ಚಾಮುಂಡೇಶ್ವರಿ): ಮಾನ್ಯ ಪ್ರವಾಸೋದ್ಯಮ ಹಾಗೂ ಹಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಾಮುಂಡಿ ಬೆಟ್ಟ ಸೇರಿದಂತೆ ಮೈಸೂರು ತಾಲ್ಲೂಕು ಮತ್ತು ಮೈಸೂರು ನಗರದಲ್ಲಿ ಪ್ರವಾಸೋದ್ಯಮವನ್ನು ಅಭಿವೃದ್ಧಿಪಡಿಸಲು ಸರ್ಕಾರ ಕೈಗೊಂಡಿರುವ ಕ್ರಮವೇನು?

ಆ) ಇಲಾಖಾ ಕಾರ್ಯಕ್ರಮಗಳನ್ನು ಆಕರ್ಷಣೀಯ ಮತ್ತು ಲಾಭದಾಯಕವನ್ನಾಗಿ ಮಾಡಲು ಇಲಾಖೆ ಕೈಗೊಂಡಿರುವ ಕ್ರಮವೇನು?

ಇ) ಈ ಕಾರ್ಯಕ್ರಮಗಳಲ್ಲಿ ಚಾಮುಂಡಿ ಬೆಟ್ಟಕ್ಕೆ ರೋಪ್ ವೇ ಅಳವಡಿಸುವ ಪ್ರಸ್ತಾವನೆ ಇದೆಯೇ? ಹಾಗಿದ್ದರೆ, ಇದಕ್ಕೆ ಆಗಬಹುದಾದ ವೆಚ್ಚವೆಷ್ಟು?